
# ಹಣ ಮತ್ತು ಪ್ರಾಣ

ವ್ಯಕ್ತಿಯೊಬ್ಬನು ಗ್ರಾಮಪ್ರದೇಶದಲ್ಲಿ ಹೋಗುತ್ತಿದ್ದನು. ಸ್ವಲ್ಪ ಭಯದಿಂದಲೂ ಆತುರದಿಂದಲೂ ನಡೆಯುತ್ತಿದ್ದ. ಬೇಗ ಬೇಗ ಹೆಜ್ಜೆ ಹಾಕುತ್ತಿದ್ದ. ಆಗ ಸಂಜೆಯಾಗುತ್ತಿತ್ತು. ಅವನು ಬೇಗ ಮನೆ ಸೇರಬೇಕಿತ್ತು.

ಈ ಆತುರದಲ್ಲಿ ಅವನು ಎಡವಿ ನೆಲಕ್ಕೆ ಬಿದ್ದನು. ತಲೆಗೆ ಪೆಟ್ಟಾಯಿತು. ರಕ್ತ ಸುರಿಯತೊಡಗಿತು. ಅವನು ಮೇಲೆದ್ದು ನಡೆಯುವ ಸ್ಥಿತಿಯಲ್ಲಿರಲಿಲ್ಲ. ಅಲ್ಲಿಯೆ ಸಂಕಟದಿಂದ ನರಳುತ್ತ ಬಿದ್ದಿದ್ದನು.



ಈ ವ್ಯಕ್ತಿಯು ಕೆಳಗೆ ಬಿದ್ದದ್ದನ್ನು ದೂರದಿಂದ ಗಮನಿಸಿದ ರೈತನೊಬ್ಬನು ಓಡಿ ಬಂದನು. ಅವನನ್ನು ಮೇಲೆತ್ತಲು ಕೈಚಾಚಿದನು. ಅಷ್ಟರಲ್ಲಿ ಕೆಳಗೆ ಬಿದ್ದಿದ್ದ ವ್ಯಕ್ತಿ 'ದೂರ ಸರಿ, ನನ್ನನ್ನು ಮುಟ್ಟಬೇಡ' ಎಂದು ಕೂಗಾಡಿದನು. ಅದನ್ನು ಲೆಕ್ಕಿಸದೆ ರೈತನು ಅವನನ್ನು ಮೇಲಕ್ಕೆ ಎತ್ತಲು ಮುಂದಾದನು. ಆಗ ವ್ಯಕ್ತಿಯು ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ಅವನನ್ನು ದೂರ ತಳ್ಳಿದನು.

ತಲೆಗೆ ಪೆಟ್ಟು ಬಿದ್ದಿರುವುದರಿಂದ ಇವನ ಬುದ್ಧಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಎಂದು ರೈತನು ಭಾವಿಸಿದನು. ಹೇಗಾದರೂ ಮಾಡಿ ಇವನನ್ನು ಎತ್ತಿಕೊಂಡುಹೋಗಿ ಆಸ್ಪತ್ರೆಗೆ ಸೇರಿಸಬೇಕು ಎಂದು ಅವನು ನಿರ್ಧರಿಸಿದನು. ಅದಕ್ಕಾಗಿ ಇತರ ಕೆಲವರನ್ನು ಕರೆದುಕೊಂಡು ಬರಲು ಆ ರೈತನು ಊರಕಡೆ ಧಾವಿಸಿದನು. ತನ್ನ ಸ್ನೇಹಿತರು ಕೆಲವರಿಗೆ ವಿಷಯವನ್ನು ತಿಳಿಸಿದ. ಅವರಲ್ಲನೇಕರು ಬರಲು ಒಪ್ಪಲಿಲ್ಲ. ಹೀಗೆ ಜನರನ್ನು ಹುಡುಕುವುದರಲ್ಲಿಯೆ ಬಹಳ ಹೊತ್ತು ಕಳೆದು ಹೋಯಿತು. ಅಂತು ಕೊನೆಗೆ ನಾಲ್ಕೈದು ಜನರನ್ನು ಕರೆದುಕೊಂಡು ಬಂದನು. ಕೆಳಗೆ ಬಿದ್ದ ವ್ಯಕ್ತಿ ಹಾಗೆಯೇ ಬಿದ್ದುಕೊಂಡಿದ್ದನು. ಇವರೆಲ್ಲ ಅವನ ಹತ್ತಿರ ಹೋದರು. ಹಿಂದೆ ಅಷ್ಟೊಂದು ಕೂಗಾಡಿದವನಲ್ಲಿ ಈಗ ಸದ್ದೇ ಇಲ್ಲ. ಬಂದವರು ಅವನನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು. ಆಗ ಅವನು ಪ್ರಾಣ ಬಿಟ್ಟಿರುವುದು ತಿಳಿಯಿತು.

ಅವನು ಯಾರು, ಎಲ್ಲಿಯವನು ಎಂದು ತಿಳಿಯುವುದಕ್ಕಾಗಿ ಅವನ ಬಟ್ಟೆ ಜೇಬುಗಳನ್ನು ಹುಡುಕಿದರು. ಅವನ ಜೇಬಿನಲ್ಲಿ ಒಂದು ದೊಡ್ಡ ನೋಟಿನ ಕಂತೆ ಸಿಕ್ಕಿತು—ಅನೇಕ ಲಕ್ಷ ಹಣವಿತ್ತು.

ಈಗ ಆ ರೈತನಿಗೆ ಅರ್ಥವಾಯಿತು, ಏಕೆ ಆ ವ್ಯಕ್ತಿ ತನ್ನನ್ನು ಮುಟ್ಟಲು ಬಿಡಲಿಲ್ಲ ಎಂದು. ತನ್ನ ಹಣ ಎಲ್ಲಿ ಕಳುವಾಗುವುದೊ ಎಂಬ ಭಯದಿಂದ ಅವನು ರೈತನಿಗೆ ತನ್ನನ್ನು ಮುಟ್ಟಲು ಬಿಡಲಿಲ್ಲ. ಹಣ ಉಳಿಸಿಕೊಳ್ಳುವ ಕಾತರದಲ್ಲಿ ಪ್ರಾಣ ಕಳೆದುಕೊಂಡಿದ್ದನು.

**ಪ್ರಾಣವಿದ್ದರೆ ತಾನೆ ಹಣದಿಂದ ಪ್ರಯೋಜನ. ಪ್ರಾಣಕ್ಕಾಗಿ ಹಣವನ್ನು ತೆರಬೇಕೇ ಹೊರತು, ಹಣಕ್ಕಾಗಿ ಪ್ರಾಣವನ್ನಲ್ಲ. ನಾವು ವಸ್ತುಗಳ ವ್ಯಾಮೋಹದಿಂದಾಗಿ ಜೀವನವನ್ನೇ ಕಡೆಗಣಿಸುತ್ತೇವೆ. ಇದು ತಪ್ಪು. ಜೀವನ ಮುಖ್ಯ, ಅದನ್ನು ಉತ್ತಮಗೊಳಿಸುವುದು ಮುಖ್ಯ. ಹಣ ಮತ್ತು ಇತರ ವಸ್ತುಗಳು ಅದಕ್ಕೆ ಎಷ್ಟರಮಟ್ಟಿಗೆ ಸಹಾಯ ಮಾಡುತ್ತವೋ ಅಷ್ಟರ ಮಟ್ಟಿಗೆ ಅವಕ್ಕೆ ಬೆಲೆ.**

# ಪುಸ್ತಕ ಪರಿಚಯ

**ಹಿಂದೂ ಹಬ್ಬಗಳು ಮತ್ತು ಉತ್ಸವಗಳು**

ಮೂಲ : ಸ್ವಾಮಿ ಹರ್ಷಾನಂದ

ಅನುವಾದ : ಪ್ರೊ.ವಿ ಮುದ್ದಲಿಂಗಣ್ಣ

ಪ್ರಕಾಶಕರು

ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ

ಮೈಸೂರು- ೫೭೦ ೦೨೦

ಪುಟಗಳು: ೮೮, ಬೆಲೆ : ರೂ. ೨೫/-

**ಪುರಾತನವೂ, ವೈವಿಧ್ಯಪೂರ್ಣವೂ, ಮಹಿಮಾನ್ವಿತವೂ** ಹಾಗೂ ಅತ್ಯಂತ ಶ್ರೀಮಂತವೂ ಆದ ಭಾರತೀಯ ಸಂಸ್ಕೃತಿಯ ಹಲವು ಮುಖಗಳನ್ನು ಚಿಕ್ಕ ಚಿಕ್ಕ ಆದರೆ ಬಹು ಚೊಕ್ಕವಾದ ಪುಸ್ತಕಗಳ ರೂಪದಲ್ಲಿ ಭಕ್ತವೃಂದಕ್ಕೆ ಉಣಬಡಿಸಿರುವವರು ಪೂಜ್ಯ ಸ್ವಾಮಿ ಹರ್ಷಾನಂದಜೀಯವರು. ಅವುಗಳಲ್ಲಿ *Hindu Festivals and Sacred Days* ಪುಸ್ತಕವೂ ಸಹ ಅತ್ಯಂತ ಮಹತ್ವಪೂರ್ಣವಾದದ್ದು. ಇದು ಜನರ ಮೆಚ್ಚುಗೆಗೆ ಪಾತ್ರವಾಗಿ ಈಗಾಗಲೇ ಎರಡು ಮುದ್ರಣಗಳನ್ನು ಕಂಡಿದೆ. ಇದನ್ನು ಕನ್ನಡಕ್ಕೆ ಪರಿವರ್ತಿಸಿ, ಕನ್ನಡಿಗರಿಗೆ ಮಹದುಪಕಾರ ಮಾಡಿರುವವರು ಪ್ರೊ.ವಿ. ಮುದ್ದಲಿಂಗಣ್ಣನವರು (ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರು ಹಾಗೂ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ವಿದ್ಯಾಸಂಸ್ಥೆಯ ಡಿಪ್ಲೊಮಾ ವಿಭಾಗದ ಪ್ರಾಂಶುಪಾಲರು). 'ಹಿಂದೂ ಹಬ್ಬಗಳು ಮತ್ತು ಉತ್ಸವಗಳು' ಎಂಬ ಕನ್ನಡದ ಈ ಆವೃತ್ತಿಕುಸುಮವು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಈಗ ಹೊರಬಂದಿದೆ. ಕನ್ನಡಿಗರಿಗೆ ಇದೊಂದು ಹರ್ಷದ ಸಂಗತಿ ಯಾಗಿದೆ.

ಭಾರತದಲ್ಲಿ ಅನೇಕಾನೇಕ ರೀತಿಯ ಹಬ್ಬ-ಹರಿದಿನಗಳು, ಜಪ-ತಪಗಳು, ಪೂಜೆ-ಪುನಸ್ಕಾರಗಳು, ವ್ರತ-ಕಥೆಗಳು ಹಾಗೂ ಉತ್ಸವ-ಜಾತ್ರೆಗಳು ಬಹಳ ಹಿಂದಿನ ಕಾಲದಿಂದಲೂ ಅನೂಚಾನವಾಗಿ ಜನರ ಜೀವನಕ್ರಮದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಪ್ರತಿಯೊಂದು ಆಚರಣೆಯ ಹಿಂದೆಯೂ ಕೆಲವು ನಿರ್ದಿಷ್ಟ ಗುರಿಗಳಿವೆ. ಇವುಗಳ ಆಚರಣೆಗೆ ಕೆಲವು ಸೈದ್ಧಾಂತಿಕ ಕಾರಣಗಳಿವೆ. ಇವುಗಳಿಗೆ ತನ್ನದೇ ಕೆಲವು ಮಹತ್ವಗಳು ಹಾಗೂ ಫಲಗಳೂ ಇವೆ. ಒಂದೇ ಹಬ್ಬವನ್ನು ದೇಶದ ಬೇರೆ ಬೇರೆ ಭಾಗಗಳಲ್ಲಿ, ಬೇರೆ ಬೇರೆ ಜನರಿಂದ, ಬೇರೆ ಬೇರೆ ಕಾಲಗಳಲ್ಲಿ ವಿಭಿನ್ನ ರೀತಿಗಳಿಂದ ಆಚರಿಸುವುದನ್ನೂ ನಾವು ನೋಡಿದ್ದೇವೆ. ದೇಶದೆಲ್ಲೆಡೆಗಳಲ್ಲಿ, ಎಲ್ಲಾ ಜನರಿಂದಲೂ ಏಕಕಾಲದಲ್ಲಿ ಆಚರಿಸುವ ಹಬ್ಬಗಳೂ ಇವೆ. ವಿಭಿನ್ನ ಸಂಸ್ಕೃತಿಗಳ ವಿವಿಧ ಹಬ್ಬಗಳು ಹಾಗೂ ಉತ್ಸವಗಳ ಬಗ್ಗೆ ತಿಳಿದುಕೊಳ್ಳಲು ಇರುವ ಏಕೈಕ ಪುಸ್ತಕವೇ 'ಹಿಂದೂ ಹಬ್ಬಗಳು ಮತ್ತು ಉತ್ಸವಗಳು.' ಭ್ರಾತೃತ್ವ ಭಾವನೆ, ಸೋದರತ್ವ ಬೆಳವಣಿಗೆ, ದಾನ-ಧರ್ಮಗಳಲ್ಲಿ ಪ್ರವೃತ್ತಿ ಹಾಗೂ ಸಚ್ಚಾರಿತ್ರ್ಯ-ಸದ್ಗುಣಗಳ ವರ್ಧನೆ ಮುಂತಾದುವುಗಳೇ ಹಬ್ಬ ಹಾಗೂ ಉತ್ಸವಗಳ ಗುರಿಗಳಾಗಿವೆ.

ಪ್ರಸ್ತುತ ಈ ಪುಸ್ತಕದಲ್ಲಿ ಒಂಬತ್ತು ಪ್ರಧಾನವಾದ ಹಬ್ಬಗಳು, ಹನ್ನೆರಡು ಇತರೆ ಹಬ್ಬಗಳು, ಇಪ್ಪತ್ತಕ್ಕೂ ಹೆಚ್ಚು ಅವತಾರಪುರುಷರ ಹಾಗೂ ಮಹಾಸಂತರ ಜಯಂತಿಗಳು ಮತ್ತು ಆರಾಧನಾ ಮಹೋತ್ಸವಗಳು, ಸರ್ವೇ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಆಚರಣೆಯಲ್ಲಿರುವ ಮುವ್ವತ್ನಾಲ್ಕು ವ್ರತಗಳೂ, ಶ್ರೀರಾಮಕೃಷ್ಣ ಮಠ ಮತ್ತು ಸಂಸ್ಥೆಗಳಲ್ಲಿ ಆಚರಣೆಯಲ್ಲಿರುವ ಹಬ್ಬಗಳು ಹಾಗೂ ಪವಿತ್ರ ದಿನಗಳೂ ಬಹಳ ಸ್ಥೂಲವಾಗಿ ವಿವರಿಸಲ್ಪಟ್ಟಿವೆ. ಇವುಗಳಲ್ಲದೇ ಪೂರ್ಣಿಮಾ ದಿನದಂದು ಆಚರಿಸುವ ಹತ್ತು ವಿಶೇಷ ಹಬ್ಬಗಳು, ಅಮಾವಾಸ್ಯೆಯಂದು ಆಚರಿಸುವ ಐದು ಹಬ್ಬಗಳೂ ಹಾಗೂ ಇತರೆ ಹತ್ತು ಪ್ರಾಂತೀಯ ಹಬ್ಬಗಳ ವಿಶ್ಲೇಷಣೆಯೂ ಈ ಪುಸ್ತಕದಲ್ಲಿದೆ.

ವ್ರತ ಎಂದರೇನು? ಉತ್ಸವ ಎಂದರೇನು? ಪವಿತ್ರ ದಿನ ಯಾವುದು? ಯಾವ ಕಾರಣಗಳಿಗಾಗಿ ಜನರು ಹಬ್ಬ ಅಥವಾ ಉತ್ಸವವನ್ನು ಬಹಳ ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ? ಅಧ್ಯಾತ್ಮ ಸಾಧನೆಗೆ ಇವುಗಳು ಹೇಗೆ ಪೂರಕವಾಗಿವೆ? ಎಂಬೀ ವಿಚಾರಗಳೂ ಸಹ ಪುಸ್ತಕದಲ್ಲಿ ಚರ್ಚಿಸಲ್ಪಟ್ಟಿವೆ. ಜಿಜ್ಞಾಸುಗಳಿಗೆ ಬೇಕಾದ ಮಾನಸಿಕ ಪೌಷ್ಟಿಕ ಆಹಾರವೂ ಇದರಲ್ಲಡಕವಾಗಿವೆ. ಬರವಣಿಗೆಯ ಶೈಲಿಯೂ ಬಹಳ ಸುಂದರವೂ, ಲಲಿತವೂ, ಸುಲಭವೂ ಆಗಿರುವುದರಿಂದ ಓದುಗರಿಗೆ ಇದು ಮುದವನ್ನು ನೀಡುತ್ತದೆ.

ಒಟ್ಟಿನಲ್ಲಿ ಕನ್ನಡಿಗರೆಲ್ಲರೂ ಈ ಪುಸ್ತಕವನ್ನು ಕೊಂಡು ಓದಿ ಬಹಳ ಸಂತೋಷಪಡಬಹುದಾಗಿದೆ. ಆಯಾಯ ಹಬ್ಬ, ವ್ರತ ಅಥವಾ ಉತ್ಸವಕ್ಕೆ ಮೊದಲು, ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಓದಿದಲ್ಲಿ, ಮುಂದೆ ಅವುಗಳನ್ನು ಆಚರಣೆಗೆ ಬಹಳ ಮಹತ್ವ ದೊರೆಯುತ್ತದೆ. ಮನುಷ್ಯನ ನಿಜವಾದ ಪ್ರಗತಿಗೆ ಇದು ದಾರಿದೀಪವಾಗಿದೆ.

*–ಡಾ. ಸಿ. ಗುರುಮೂರ್ತಿ*

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಅಕ್ಟೋಬರ್

| | | |
|---|---|---|
| 04 | ಬುಧವಾರ | ಶ್ರೀದುರ್ಗಾಪೂಜಾ ಸಪ್ತಮೀ |
| 05 | ಗುರುವಾರ | ಮಹಾಷ್ಟಮಿ |
| 06 | ಶುಕ್ರವಾರ | ಮಹಾಷ್ಟಮಿ |
| 07 | ಶನಿವಾರ | ಮಹಾನವಮಿ |
| 08 | ಭಾನುವಾರ | ವಿಜಯದಶಮಿ |
| 14 | ಶನಿವಾರ | ಆಧ್ಯಾತ್ಮಿಕ ಶಿಬಿರ |

ಸಂಜೆ 3.30ರಿಂದ 7.00

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ. (ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ)